# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಕ್ರಿ. ಮಿಸಿಲೆ.ನಂ. 42-2017** **ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು | ಶ್ರೀನಿವಾಸ್ ಆರ್ |
| ತಂದೆ/ಗಂಡನ ಹೆಸರು | ರಂಗಸ್ವಾಮಿನಾಯಕ ವೈ.ಹೆಚ್ |
| ವಯಸ್ಸು | 46 ವರ್ಷ |
| ಉದ್ಯೋಗ | ಶಿಕ್ಷಕ |
| ವಾಸ್ತವ್ಯ | ಸಂತೆಮರಳ್ಳಿ, ಚಾಮರಾಜನಗರ ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 18-10-2023. |

**ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ಎಂ.ಸಿ.ಎಸ್ ವಕೀಲರಿಂದಃ**

ಅರ್ಜಿದಾರರು ನನ್ನ ಪತ್ನಿಯಾಗಬೇಕು. ಸಂತೆಮರಹಳ್ಳಿಯಲ್ಲಿ ನಾನು, ನನ್ನ ತಾಯಿ, ನನ್ನ ಮಗ ಹಾಗೂ ನನ್ನ ಮದುವೆಯಾಗದೇ ಇರುವ ಅಕ್ಕ ನಮ್ಮ ಸ್ವಂತ ಮನೆಯಲ್ಲಿ ವಾಸವಿರುತ್ತೇವೆ. ನನ್ನ ತಂದೆ-ತಾಯಿಗೆ 6 ಜನ ಮಕ್ಕಳಿದ್ದು ಅವರುಗಳ ಪೈಕಿ ನಾಲ್ವರು ಗಂಡ ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನಮ್ಮ ತಂದೆ-ತಾಯಿಗಳಿಗೆ ನಾನೇ ಕಿರಿಯ ಮಗನಾಗಿರುತ್ತೇನೆ. ನನ್ನ ಸಹೋದರಿಯಾದ ರತ್ನಮ್ಮ ರವರನ್ನು ಹೊರತುಪಡಿಸಿ ಉಳಿದೆಲ್ಲರಿಗೂ ವಿವಾಹವಾಗಿರುತ್ತದೆ. ನಮ್ಮ ಕುಟುಂಬದಲ್ಲಿ ನಾನೊಬ್ಬನೇ ಸರ್ಕಾರಿ ಕೆಲಸದಲ್ಲಿ ಇರುತ್ತೇನೆ.

2. ಅರ್ಜಿದಾರರು ಮತ್ತು ನನ್ನ ವಿವಾಹವು ಕೊಳ್ಳೇಗಾಲದ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ದಿ.27-06-2011 ರಂದು ನೆರವೇರಿರುತ್ತದೆ. ಅರ್ಜದಾರರಿಗೆ ನಾನು ಸ್ವಂತ ಸೋದರ ಮಾವನಾಗಬೇಕು. ನಾನು ಅರ್ಜಿದಾರರ ತಾಯಿಯ ಸ್ವಂತ ತಮ್ಮ. ವಿವಾಹದ ವೆಚ್ಚವನ್ನೆಲ್ಲಾ ನಾನೇ ಭರಿಸಿದ್ದು. ಸದರಿ ವಿಚಾರವನ್ನು ಅರ್ಜದಾರರು ತಮ್ಮ ಸಾಕ್ಷ್ಯದಲ್ಲಿ ಒಪ್ಪಿಕೊಂಡಿರುತ್ತಾರೆ. ನಾನು ಅರ್ಜದಾರರು 4 ವರ್ಷಗಳ ಕಾಲ ವೈವಾಹಿಕ ಜೀವನ ನಡೆಸಿರುತ್ತೇವೆ. ಮದುವೆ ಪೂರ್ವದಲ್ಲಿಯೇ ನನ್ನ ತಾಯಿ ಮತ್ತು ಮದುವೆಯಾಗದ ಅಕ್ಕ

ಕೊನೆಯವರೆವಿಗೂ ನಮ್ಮೊಂದಿಗೆ ಜೀವನ ಮಾಡುತ್ತಾರೆ ಎಂಬ ವಿಚಾರ ಅರ್ಜದಾರರಿಗೆ ಮತ್ತು ಆಕೆಯ ತಂದೆ-ತಾಯಿಗಳಿಗೆ ತಿಳಿದಿರುತ್ತದೆ. ಅರ್ಜದಾರರ ತಾಯಿಯಾದ ನನ್ನ ಅಕ್ಕನಿಗೆ ಒಟ್ಟು ನಾಲ್ವರು ಹೆಣ್ಣು ಮಕ್ಕಳು. ನನ್ನ ಅಕ್ಕನಿಗೆ ಬಡತನ ಇದ್ದುದ್ದರಿಂದ ನನ್ನ ಅಕ್ಕ ನನ್ನ ತಾಯಿಯನ್ನು ಅರ್ಜಿದಾರರ ಅಕ್ಕನನ್ನು ನನ್ನ ಅಣ್ಣನಿಗೆ ವಿವಾಹ ಮಾಡಿಕೊಳ್ಳುವಂತೆ ಬೇಡಿಕೊಂಡಿದ್ದರಿಂದ ನನ್ನ ಅಣ್ಣ ತಾನೇ ಮದುವೆ ವೆಚ್ಚವನ್ನು ಭರಿಸಿ ಅರ್ಜಿದಾರರ ಅಕ್ಕನನ್ನು ವಿವಾಹವಾಗಿರುತ್ತಾರೆ. ಒಂದು ವರ್ಷ ಕಳೆದ ನಂತರ ಅರ್ಜಿದಾರರ ತಾಯಿ ಪುನಃ ನನ್ನ ತಾಯಿ, ಅಣ್ಣ ಮತ್ತು ನನ್ನ ಬಳಿ ಬಂದು ಸರ್ಕಾರಿ ಕೆಲಸದಲ್ಲಿ ಇರುವ ವ್ಯಕ್ತಿಗೆ ಅರ್ಜಿದಾರರನ್ನು ಕೊಟ್ಟು ಮದುವೆ ಮಾಡಲು ತಾವು ಶಕ್ತರಲ್ಲದ ಕಾರಣ ಅರ್ಜಿದಾರರನ್ನು ನನಗೆ ವಿವಾಹ ಮಾಡಿಕೊಳ್ಳುವಂತೆ ಬೇಡಿಕೊಳ್ಳುತ್ತಾರೆ, ಆ ಸಮಯ ನನ್ನ ತಾಯಿ ಮತ್ತು ನನ್ನ ಮದುವೆಯಾದ ಅಕ್ಕ ಕೊನೆಯವರೆವಿಗೂ ನನ್ನ ಜೊತೆಯಲ್ಲಿ ಇರಲು ಒಪ್ಪಿ ನನ್ನನ್ನು ಒಪ್ಪಿಸಿ ಮದುವೆಯಾಗುವಂತೆ ಕೇಳಿಕೊಳ್ಳುತ್ತಾರೆ. ನಂತರ ನಾನು ನನ್ನ ತಾಯಿ ಒಪ್ಪಿ ಅರ್ಜಿದಾರರನ್ನು ವಿವಾಹವಾಗಿರುತ್ತೇನೆ. ನನ್ನ ಅಕ್ಕ ಬಿ.ಪಿ.ಎಲ್ ಪಡಿತರ ಚೀಟಿಯನ್ನು ಹೊಂದಿದ್ದವರಾಗಿದ್ದು ಅವರ ಸಂಪಾದನೆಯೂ ಅವರ ಹೊಟ್ಟೆ ಬಟ್ಟೆಗೆ ಸಾಕಾಗುತ್ತದೆ. ಹಾಗಾಗಿ ಆರ್ಜಿದಾರರು ಹೇಳಿರುವಂತೆ ಅರ್ಜಿದಾರರ ತಂದೆ-ತಾಯಿಗಳು ನನಗೆ ಯಾವುದೇ ವರದಕ್ಷಿಣೆಯನ್ನು ನೀಡಿರುವುದಿಲ್ಲ ಹಾಗೂ ನಾನು ಪಡೆದುಕೊಂಡಿರುವುದಿಲ್ಲ. ಮದುವೆ ಆದ ನಂತರ ಅರ್ಜಿದಾರರು ತನ್ನ ಜವಬ್ದಾರಿ ಮತ್ತು ಕರ್ತವ್ಯಗಳನ್ನು ನಿಭಾಯಿಸುತ್ತಿರಲಿಲ್ಲ. ನಾನು, ನನ್ನ ಅಕ್ಕ ಅರ್ಜಿದಾರರು ನನ್ನ ಅಕ್ಕನ ಮಗಳು ಎಂದು ನನ್ನ ತಾಯಿ ಮೊಮ್ಮಗಳು ಎಂದು ಸಹಿಸಿಕೊಂಡು ಬುದ್ಧಿವಾದ ಹೇಳಲು ಹೋದರೆ ಅರ್ಜಿದಾರರು ನಮಗೆ ಸಂಸ್ಕಾರವಿಲ್ಲದೇ ಏಕವಚನದಲ್ಲಿ ಅಗೌರವವಾಗಿ ಮಾತನಾಡುತ್ತಿದ್ದರು.

3. ನನ್ನ ಮಗ ದಿ.25-08-2013 ರಂದು ಜನಿಸಿದ್ದು ಅರ್ಜಿದಾರರು ಬಾಣಂತವನ್ನು ಮುಗಿಸಿಕೊಂಡು ಬಂದ ನಂತರ ಹೊಸ ಸಮಸ್ಯೆ ತಂದು ಒಡ್ಡಿದ್ದು ನನ್ನ ತಾಯಿ ಮತ್ತು ಮದುವೆಯಾದ ನನ್ನ ಅಕ್ಕನನ್ನು ಹೊರಹಾಕುವಂತೆ ಹಾಗೂ ತನ್ನ ತಂದೆ-ತಾಯಿಗಳನ್ನು ತಂದು ಇರಿಸಿಕೊಳ್ಳುವಂತೆ ಒತ್ತಾಯ ಮಾಡುತ್ತಾರೆ. ನಾನು ಅದಕ್ಕೆ ಒಪ್ಪದೇ ಇದ್ದಾಗ ನನ್ನ ವಿರುದ್ಧ ವರದಕ್ಷಿಣೆ ಕಾಯ್ದೆ ಅಡಿ ದೂರು ನೀಡಿ ನನ್ನ ಕೆಲಸ ಹೋಗುವಂತೆ ಮಾಡುವುದಾಗಿ ಬೆದರಿಕೆಯನ್ನು ಒಡ್ಡುತ್ತಾರೆ. ಗಂಟೆಗಟ್ಟಲೇ ರೂಮಿನ ಬಾಗಿಲನ್ನು ಹಾಕಿಕೊಂಡು ನನ್ನ ಹೆಸರನ್ನು ಬರೆದುದಿಟ್ಟು

ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಅರ್ಜಿದಾರರು ನನ್ನನ್ನು ಹೆದರಿಸುತ್ತಿದ್ದರು. ಇದರಿಂದ ನನಗೆ ಮಾನಸಿಕವಾಗಿ ತುಂಬಾ ನೋವಾಗಿತ್ತು. ನಾನು ಯಾವಾಗ ಅರ್ಜಿದಾರರ ಒತ್ತಾಯಕ್ಕೆ ಒಪ್ಪದೇ ಇದ್ದಾಗ ಅರ್ಜಿದಾರರು ನನಗೆ ಹೊಡೆಯುವುದು ಹೊರಗೆ ಬಂದು ಕೂಗಾಡುವುದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ನನ್ನ ಮೇಲಿನ ದ್ವೇಷಕ್ಕೆ ನನ್ನ ಮಗನನ್ನು ಎತ್ತಿಕೊಳ್ಳುತ್ತಿರಲಿಲ್ಲ ಅವನು ಅಳುತ್ತಿದ್ದರು ಹಾಲನ್ನು ಸಹ ಕುಡಿಸುತ್ತಿರಲಿಲ್ಲ. ಆ ಸಮಯ ನಾನು ಅರ್ಜಿದಾರರನ್ನು ಪ್ರಶ್ನೆ ಮಾಡಿದಾಗ ಅರ್ಜಿದಾರರು ನೀನು ಸತ್ತರೆ ದೇವಲೋಕ ಹಾಳಾಗುವುದಿಲ್ಲ, ಕೆಲಸ ಮತ್ತು ಹಣ ಸಿಗುತ್ತದೆ ಎಂದು ನನ್ನನ್ನು ನಿಂದಿಸುತ್ತಿದ್ದರು. ಅರ್ಜಿದಾರರು ನನಗೆ ನೀಡುತ್ತಿದ್ದ ಮಾನಸಿಕ ಮತ್ತು ದೈಹಿಕ ಕಿರುಕುಳವನ್ನು ತಾಳಲಾರದೇ ಸದರಿ ವಿಚಾರವನ್ನು ಅರ್ಜಿದಾರರ ತಾಯಿಯಾದ ನನ್ನ ಅಕ್ಕನಿಗೆ ತಿಳಿಸಿರುತ್ತೇನೆ. ದುರಾದೃಷ್ಟವಷಾತ್ ನನ್ನ ಅಕ್ಕನೇ ಅರ್ಜಿದಾರರಿಗೆ ಪ್ರೇರಣೆ ನೀಡಿದವರಾಗಿದ್ದಾರೆ. ನಂತರ ನಾವು ಹೊಸ ಮನೆಗೆ ಹೋಗಿದ್ದು, ಹೊಸ ಮನೆಗೆ ಹೋದ ನಂತರ ನನ್ನ ತಾಯಿ ಮತ್ತು ಅಕ್ಕನನ್ನು ಹೊರ ಹಾಕುವಂತೆ ಅರ್ಜಿದಾರರು ವಿಪರೀತ ಹಿಂಸೆ ನೀಡಲು ಶುರುಮಾಡಿದ್ದು ನಾನು ಒಪ್ಪದೇ ಇದ್ದಾಗ ಅರ್ಜದಾರರು ಆತ್ಮಹತ್ಯೆಗೆ ಪ್ರಯತ್ನಿಸಿದ್ದು ಆ ಸಮಯ ನಾನು ಮನೆಯಲ್ಲಿ ಇದ್ದುದ್ದರಿಂದ ಆಕೆಯನ್ನು ರಕ್ಷಿಸಿರುತ್ತೇನೆ.

4. ದಿ.23-05-2016 ರಂದು ನಾನು ಮನೆಯಲ್ಲಿ ಇಲ್ಲದ ಸಮಯ ಅರ್ಜಿದಾರರು ಯಾರಿಗೂ ಹೇಳದೇ ತನ್ನ ತಾಯಿಯ ಜೊತೆ ನಂಜನಗೂಡನ ಆಕೆಯ ತವರು ಮನೆಗೆ ಬಂದಿದ್ದು ಆ ಸಮಯ ಅರ್ಜಿದಾರರು ಒಂದುವರೆ ತಿಂಗಳ ಗರ್ಭಿಣಿ ಆಗಿರುತ್ತಾರೆ. ನನ್ನ ಮಗನಿಗೆ ಅರ್ಜಿದಾರರು ಪ್ರೀತಿ ವಾತ್ಸಲ್ಯದಿಂದ ನೋಡಿಕೊಳ್ಳದೇ ಇದ್ದ ಕಾರಣ ನನ್ನ ಮಗ ನನ್ನ ತಾಯಿ ಅಕ್ಕ ಮತ್ತು ನನ್ನೊಂದಿಗೆ ಬೆಳೆದಿರುತ್ತಾನೆ. ಅರ್ಜಿದಾರರು ಮನೆ ಬಿಟ್ಟು ಹೋದ ಸಮಯದಲ್ಲಿಯೂ ಸಹ ನನ್ನ ಮಗನನ್ನು ಕರೆದುಕೊಂಡು ಹೋಗಲಿಲ್ಲ. ಇಷ್ಟೆಲ್ಲಾ ಅರ್ಜಿದಾರರು ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದುದ್ದರಿಂದ ನನಗೆ ಅರ್ಜಿದಾರರೊಂದಿಗೆ ಅಸಾಧ್ಯ ಮತ್ತು ಅಪಾಯ ಎಂದು ನಿರ್ಧಾರ ಮಾಡಿ ನಾನು ಅರ್ಜಿದಾರರ ವಿರುದ್ಧ ವಿಚ್ಛೇದನಕ್ಕಾಗಿ ಚಾಮರಾಜನಗರದ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತೇವೆ. ನಾನು ಅರ್ಜಿದಾರರ ವಿರುದ್ಧ ವಿಚ್ಛೇದನಕ್ಕಾಗಿ ಅರ್ಜಿಸಲ್ಲಿಸಿದ ನಂತರ ಸುಳ್ಳು ವಿಚಾರಗಳನ್ನು ನಮೂದಿಸಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಾನು ಅರ್ಜಿದಾರರಿಗೆ ಯಾವುದೇ ರೀತಿಯ ಕೌಟುಂಬಿಕ ದೌರ್ಜನ್ಯ

ಮಾಡಿರುವುದಿಲ್ಲ ಹಾಗೂ ಆಕೆಗೆ ನಾನು ಸಣ್ಣನೋವನ್ನು ಸಹ ನೀಡಿರುವುದಿಲ್ಲ. ಆದರೆ ಅರ್ಜಿದಾರರೇ ನನಗೆ ದೌರ್ಜನ್ಯ ಮಾಡಿರುತ್ತಾರೆ.

5. ಅರ್ಜಿದಾರರು ಮನೆಯಿಂದ ಹೋದ ಸಮಯ ಗರ್ಭಿಣಿ ಆಗಿದ್ದು ನಂತರ ಅರ್ಜಿದಾರರು ಹೆಣ್ಣು ಮಗುಳಿಗೆ ಜನ್ಮ ನೀಡಿದ್ದ ಸದರಿ ವಿಚಾರವನ್ನು ನನಗೆ ತಿಳಿಸಿರುವುದಿಲ್ಲ. ನಂತರ ಸದರಿ ವಿಚಾರವು ಬೇರೆಯವರಿಂದ ನನಗೆ ತಿಳಿದು ಬರುತ್ತದೆ. ಈ ಅರ್ಜಿಯನ್ನು ದಾಖಲಿಸಿದ ನಂತರ ಅರ್ಜಿದಾರರು ಹಾಗೂ ಆಕೆಯ ತಂದೆ-ತಾಯಿಗಳು ಬಂದು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ನನ್ನ ಮಗಳು ಹುಟ್ಟಿದ ನಂತರ ನನ್ನ ಮಗಳನ್ನು ನೋಡಬೇಕೆಂಬ ಇಚ್ಛೆ ಇದ್ದರೂ ಸಹ ಅರ್ಜಿದಾರರು ಹಾಗೂ ಅವರ ತಂದೆ-ತಾಯಿಗಳು ನನ್ನ ಮೇಲೆ ಹಲ್ಲೆ ಮಾಡಬಹುದು ಎಂಬ ಭಯದಿಂದ ನಾನು ನನ್ನ ಮಗಳನ್ನು ನೋಡಿರುವುದಿಲ್ಲ. ದಿ.11-09-2017 ರಂದು ನನ್ನ ಕುಟುಂಬದವರಿಂದ ನನ್ನ ಮಗಳು ತೀರಿಕೊಂಡ ವಿಚಾರ ನನಗೆ ತಿಳಿದು ಬರುತ್ತದೆ. ನಂತರ ನನ್ನ ಅಣ್ಣ ಅತ್ತಿಗೆ ಮಗುವನ್ನು ನೋಡಲು ನಂಜನಗೂಡಿಗೆ ಬಂದಿದ್ದು ಆಗ ಅರ್ಜಿದಾರರು ಮತ್ತು ಬೆಂಬಲಿಗರು ಮಾತನಾಡುತ್ತಿದ್ದ ಮಾತನ್ನು ಕೇಳಿ ನನ್ನ ಅಣ್ಣ ನನಗೆ ಕರೆ ಮಾಡಿ ನಂಜನಗೂಡಿಗೆ ಬಂದರೆ ನನ್ನ ಪ್ರಾಣಕ್ಕೆ ಅಪಾಯ ಇರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ನಾನು ನನ್ನ ಮಗಳನ್ನು ನೋಡಲು ಬರಲಾಗದೇ ಶಾಲೆಗೂ ಹೋಗಲಾಗದೇ ಬೇರೆಡೆ ಕುಳಿತಿರುತ್ತೇನೆ. ದಿ.12/09/2017 ರಂದು ಅರ್ಜಿದಾರರು ಮತ್ತು ಆಕೆಯ ತಂದೆ-ತಾಯಿ ಮತ್ತು ಬೆಂಬಲಿಗರು ಒಟ್ಟಾರೆ ಸುಮಾರು 33 ಜನರು ವಾಹನವನ್ನು ಮಾಡಿಕೊಂಡು ನಾನು ಕೆಲಸ ಮಾಡುವ ಶಾಲೆಗೆ ನನ್ನ ಮಗಳ ಮೃತ ದೇಹದ ಸಮೇತ ಶಾಲೆಗೆ ಬಂದು ಅಲ್ಲಿದ್ದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಮಕ್ಷಮ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಮತ್ತು ಮಗಳ ಮೃತ ದೇಹವನ್ನು ಎಲ್ಲರಿಗೂ ಕರೆದು ಕರೆದು ತೋರಿಸಿರುತ್ತಾರೆ. ವಾತಾವರಣ ಹಾಳಾಗುತ್ತಿದೆ ಎಂದು ತಿಳಿದು ಬಂದ ನಂತರ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರು ಅರ್ಜಿದಾರರಿಗೂ ಅವರ ಸಂಗಡಿಗರಿಗೆ ಎಚ್ಚರಿಕೆ ನೀಡಿರುತ್ತಾರೆ. ನಂತರ ಗೂಳಿಪುರ ಗ್ರಾಮದ ಮುಖ್ಯ ರಸ್ತೆಯಲ್ಲಿಯೂ ಸಹ ನನ್ನ ಮಗಳ ಮೃತದೇಹವನ್ನು ಇಟ್ಟುಕೊಂಡು ನನ್ನ ವಿರುದ್ಧ ಅವಹೇಳನಕಾರಿ ಮಾತುಗಳನ್ನು ಆಡಿ ನನಗೆ ಅವಮಾನ ಮಾಡುತ್ತಾರೆ. ನಂತರ ಯಳಂದೂರಿಗೆ ಹೋಗಿ ಅಲ್ಲಿಯೂ ಸಹ ನನಗೆ ಅವಮಾನ ಮಾಡಿ ನಂತರ ನನ್ನ ಮಗಳ ಮೃತದೇಹವನ್ನು ತೆಗೆದುಕೊಂಡು ಸಂತೆಮರಹಳ್ಳಿಗೆ ಬಂದು

ನನಗೆ ಅವಮಾನ ಮಾಡಿರುತ್ತಾರೆ. ನಂತರ ನನ್ನ ಮಗಳ ಶವವನ್ನು ತೆಗೆದುಕೊಂಡು ಸಂತೆಮರಹಳ್ಳಿ ಪೊಲೀಸರ್ ಠಾಣೆಗೆ ದೂರು ನೀಡಲು ಹೋದಾಗ ಪೊಲೀಸರು ಅರ್ಜಿದಾರರಿಗೆ ಬೈದು ನನ್ನ ಮಗಳ ಅಂತ್ಯಸಂಸ್ಕಾರವನ್ನು ಮಾಡುವಂತೆ ಬುದ್ಧಿವಾದ ಹೇಳುತ್ತಾರೆ. ನಂತರ ಸಂಜೆ ನಾನು ಮನೆಗೆ ಬರುವಾಗ ಎಲ್ಲರೂಹ ನನಗೆ ಅಪಹಾಸ್ಯ ಮಾಡುತ್ತಿದ್ದು ವಿಚಾರ ಮಾಡಲಾಗಿ ಗ್ರಾಮಸ್ಥರು ಮತ್ತು ನಮ್ಮ ಶಾಲಾ ಮುಖ್ಯೋಪಾಧ್ಯಾಯರು ವಿಚಾರಗಳನ್ನು ನನಗೆ ತಿಳಿಸಿರುತ್ತಾರೆ. ಅರ್ಜಿದಾರರು ಮತ್ತು ಅವರ ಸಂಗಡಿಗರು ನಡೆದುಕೊಂಡ ರೀತಿಯಿಂದ ನನ್ನ ವ್ಯಕ್ತಿತ್ವಕ್ಕೆ ಮತ್ತು ವೃತ್ತಿ ಗೌರವಕ್ಕೆ ದಕ್ಕೆ ಆಯಿತು. ಇದರಿಂದಾಗ ನನಗೆ  ವೃತ್ತಿಯನ್ನು ಮಾಡಲಾಗದೇ ನಾನು ಮಾನಸಿಕ ಯಾತನೆಯನ್ನು ಅನುಭವಿಸಿದ್ದು ಇದರಿಂದ ನನಗೆ ಬದುಕೇ ಬೇಡ ಎಂದು ಅನಿಸಿರುತ್ತದೆ. ಆದರೆ ನಾನು ನನ್ನ ಚಿಕ್ಕವಯಸ್ಸಿನ ಮಗನಿಗಾಗಿ ಎಲ್ಲವನ್ನು ಸಹಿಸಿಕೊಂಡಿರುತ್ತೇನೆ. ನಂತರ ನನ್ನ ಸ್ನೇಹಿತರ ಸಹಾಯದಿಂದ ಅರ್ಜಿದಾರರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿರುತ್ತೇನೆ.

6. 2019 ರಲ್ಲಿ ನನ್ನ ಮೇಲೆ ಕೊಲೆ ಪ್ರಯತ್ನ ಆಗಿದ್ದು ಆ ತಲೆಗೆ ಗಾಯವಾಗಿರುತ್ತದೆ. ಆ ಸಮಯ ನನ್ನ ಚಿಕಿತ್ಸೆಗಾಗಿ 5 ರಿಂದ 6 ಲಕ್ಷ ಖರ್ಚಾಗಿರುತ್ತದೆ. ನಾನು ಈ ಮೊದಲು ಮನೆ ಕಟ್ಟಲು ಸಾಲ ಮಾಡಿಕೊಂಡಿರುತ್ತೇನೆ. ನನಗೆ ಬರುವ ಸಂಬಳದಲ್ಲಿ ಕಟಾವುಗಳನ್ನು ಕಳೆದ ನಂತರ ನನಗೆ ಕೇವಲ ರೂ.30,000/- ಉಳಿಯುತ್ತದೆ. ಸದರಿ ಹಣದಲ್ಲಿ ನನ್ನ ಮಗನ ವಿದ್ಯಾಭ್ಯಾಸ ಪೌಷ್ಟಿಕ ಆಹಾರ ಮತ್ತು ವೈದ್ಯಕೀಯ ವೆಚ್ಚಕಾಗಿ ಹಾಗೂ ನನ್ನ ಕುಟುಂಬದ ನಿರ್ವಹಣೆಗಾಗಿ ಹಾಗೂ ನನ್ನ ತಾಯಿ ಮತ್ತು ಸಹೋದರಿಯ ವೈದ್ಯಕೀಯ ವೆಚ್ಚಕ್ಕಾಗಿ ಸುಮಾರು ರೂ.30,000/- ಗಳು ಖರ್ಚಾಗಿರುತ್ತದೆ. ಆಗಾಗಿ ನಾನು ನಮ್ಮ ಕುಟುಂಬದ ನಿರ್ವಹಣೆಗಾಗಿ ಹಣ ಸಾಕಾಗದೇ ಇದ್ದ ಸಮಯ ಬೇರೆಯವರ ಬಳಿ ಸಾಲ ಮಾಡಬೇಕಾಗುತ್ತದೆ. ಆಗಾಗಿ ನಾನು ಅರ್ಜಿದಾರರಿಗೆ ಜೀವನಾಂಶ ನೀಡಲು ಶಕ್ತನಾಗಿರುವುದಿಲ್ಲ. ಅರ್ಜಿದಾರರಿಗೆ ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದು ಕಂಪ್ಯೂಟರ್ ತರಬೇತಿಯನ್ನು ಪಡೆದಿದ್ದು ಟೈಲರಿಂಗ್ ಕೆಲಸವನ್ನು ಮಾಡುತ್ತಿದ್ದು ತಿಂಗಳೊಂದಕ್ಕೆ ರೂ.15,000/- ಗಳವರೆಗೆ ಸಂಪಾದನೆ ಮಾಡುತ್ತಾರೆ. ಆಗಾಗಿ ನಾನು ಅರ್ಜಿದಾರರಿಗೆ ಯಾವುದೇ ಜೀವನಾಂಶವನ್ನು ಭರಿಸಬೇಕಾಗಿರುವುದಿಲ್ಲ. ಆಗಾಗಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಕರಿಸಿಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥನೆ.

7. ಕೆಲವೊಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದು ಅವುಗಳನ್ನು ನನ್ನ ಪರ ನಿಶಾನೆಗಳನ್ನಾಗಿ ಗುರುತಿಸಬೇಕಾಗಿ ಪ್ರಾರ್ಥನೆ. ಯಳಂದೂರ ಪೊಲೀಸರ್ ಠಾಣೆಯಲ್ಲಿ ನೀಡಿರುವ ಜಂಟಿ ಹೇಳಿಕೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–1 ಎಂದು, ದಿ.20–11–2017 ರಂದು ಮಾನ್ಯ ಪೊಲೀಸ್ ವರಿಷ್ಠಾಧಿಕಾರಿಗಳು, ಚಾಮರಾಜನಗರ ಇವರಿಗೆ ಸರ್ಕಲ್ ಇನ್ಸ್ ಪೆಕ್ಟರ್ ರವರು ನೀಡಿರುವ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–2 ಎಂದು, ನನ್ನ ಮಗನ ಶಾಲಾ ಶುಲ್ಕದ ರಶೀದಿಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಡಿ–3 ಎಂದು, ನನ್ನ ಮಗನ ಸ್ಪೋರ್ಟ್ಸ್ ಅಸೋಸಿಯೇಷನ್‌ಗೆ ಸಂಬಂಧಿಸಿದ ಶುಲ್ಕದ ರಶೀದಿಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಒಟ್ಟಾರೆ ನಿಡಿ–4 ಎಂದು, ನನ್ನ ಮನೆ ಸಾಲದ ಅಕೌಂಟ್ ಸ್ಟೇಟ್‌ಮೆಂಟ್ ಅನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–5 ಎಂದು, ನನ್ನ ಲೋನ್ ಅಕೌಂಟ್ ಸ್ಟೇಟ್‌ಮೆಂಟ್ ಅನ್ನು ಹಾಜರುಪಡಿಸುತ್ತಿದ್ದು ಅದನ್ನು ಒಟ್ಟಾರೆಯಾಗಿ ನಿಡಿ–6 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–7 ಎಂದು, ಜೆ.ಎಸ್.ಎಸ್. ಆಸ್ಪತ್ರೆಯವರು ನೀಡಿರುವ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಡಿ–8 ಮತ್ತು 9 ಎಂದು,  ನನ್ನ ರೇಡಿಯಾಲಜಿ ವರದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–10 ಎಂದು, ದಿ.08–01–2019 ರಂದು ಡಾ.ಎಂ.ಡಿ ಸದಾನಂದ ಮೂರ್ತಿ ಮೆಮೋರಿಯಲ್ ಆಸ್ಪತ್ರೆಯವರು ನೀಡಿರುವ ವರದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–11 ಎಂದು, ಅಶ್ವಿನಿ ಡಯಾಗ್ನೋಸ್ಟಿಕ್ ರವರು ನೀಡಿರುವ ವರದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–12 ಎಂದು, ಶುಶ್ರುತ ಕಣ್ಣಿನ ಆಸ್ಪತ್ರೆಯವರು ನೀಡಿರುವ ನನ್ನ ತಾಯಿಯವರ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–13 ಎಂದು, ಎಂ.ಸಿ.33/2016 ರ ಮಧ್ಯಂತರ ಆದೇಶದ ದೃಢೀಕೃತ ಪ್ರತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–14 ಎಂದು, ಎಂ.ಸಿ.32/2021 ರ ಅರ್ಜಿಯ ದೃಢೀಕೃತ ಪ್ರತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–15 ಎಂದು, ಪೇಸ್ಲಿಪ್ ಅನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–16 ಎಂದು ಗುರುತಿಸಲಾಯಿತು.

ಆದುದರಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಕರಿಸಿಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥನೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಎದುರುದಾರರ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ.ನ್ಯಾದಂ. ನಂಜನಗೂಡು**